ರೇಖಾಚಿತ್ರಗಳು:
ಜಬೀವುಲ್ಲಾ ಎಂ. ಅಸದ್



# ನಿಜವಾಗಿಯೂ ಹೆಣ್ಣು ಸಿಂಹ ಗರ್ಜಿಸುವುದೇ?

ಹೊತ್ತು ಮುಳುಗಿತು

ತಣ್ಣನೆಯ ಜೈಲಿನಲ್ಲಿ
ನಾನು
ಗೋಡೆಗೆ ಒರಗಿ
ಅಂತಿಮ ಕವಿತೆ
ಬರೆದು ಮುಗಿಸುತ್ತೇನೆ

ತಂತಿ ಜಾಲರಿಯ ನಡುವೆ
ಗಾಬರಿಯಿಂದ ಹಿಂಜರಿಯುತ್ತಾ
ಮಂದವಾದ ಬೆಳಕು
ನನ್ನ ಕಡೆಗೆ ಬರುತ್ತಿದೆ
ಲೋಕಕ್ಕೆಲ್ಲ ಸೋವಿ
ಸೂರ್ಯನ ಬೆಳಕು
ಇಲ್ಲಿ ಬಲು ತುಟ್ಟಿ

ಹೊರಗೆ ವಸಂತದ ಗಾಳಿ ಬೀಸುತ್ತಿರಬಹುದು

ಕೊನೆಯ ಸಲ ಕತ್ತಲ ಆಕಾಶ
ಒಂದಿಷ್ಟು ನಕ್ಷತ್ರಗಳನ್ನಾದರೂ ಕಣ್ತುಂಬಿಕೊಳ್ಳಲು
ನನಗೆ ಅವಕಾಶ ಕೊಡಿ

ಜೈಲಿನ ಕಿಟಕಿಗೆ
ಕಾರ್ಮೋಡವನ್ನೇ ತುರುಕಲಾಗಿದೆ
ಇದು ಕನಸಲ್ಲ
ಇದು ದುಗುಡವಲ್ಲ
ಇದು ಭೀತಿಯಲ್ಲ
ಇದು ದ್ವೇಷವಲ್ಲ

ಸಣ್ಣದಾಗಿ ಗರ್ಜನೆ ಕೇಳಿ ಬರುತ್ತಿದೆ...
ನಿಜವಾಗಿಯೂ
ಹೆಣ್ಣು ಸಿಂಹ ಗರ್ಜಿಸುವುದೇ?
ಯಾಕೋ
ನನ್ನೊಡಲ ವಿಶ್ವ ಕಂಪಿಸುತ್ತಿದೆ

ನನ್ನ ಪೂರ್ವಜರು ಹೀಗೆ ಹೇಳಿ ಹೋದರು

‘ವೀರ ಪುತ್ರನೊಬ್ಬ ತಂಗಿಹೋದ ಸಿಂಹದ ಗುಹೆ
ನನ್ನ ಗರ್ಭ!’

ನಾನು ಕೇಳುವೆ ತಾಯೀ
ಆಕೆ
ಪುತ್ರಿ ಯಾಕಾಗಬಾರದು?

